ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ ದಿನಾಂಕ : DATE : 12/07/2019

# ರಾಜೀನಾಮೆ ಅಂಗೀಕಾರಕ್ಕೆ ವಿಳಂಬ ಮಾಡಿಲ್ಲ

12-7-19



ಸಂ.ಕ ಸಮಾಚಾರ ಬೆಂಗಳೂರು

ಯಾರನ್ನೂ ಖುಷಿಪಡಿಸುವ ಇಲ್ಲವೇ ತೃಪ್ತಿಪಡಿಸುವುದಗೋಸ್ಕರ ನೀತಿ-ನಿಯಮ ಮೀರಿ ಸಂವಿಧಾನದ ಆಶಯ ಮತ್ತು ಜನರ ಭಾವನೆಗಳನ್ನು ಧಿಕ್ಕರಿಸಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ಎಂದು ಸಭಾಧ್ಯಕ್ಷ ರಮೇಶಕುಮಾರ್ ತಮ್ಮ ನಿಲುವು ಪ್ರಕಟಿಸಿದ್ದಾರೆ.

ಸುಪ್ರೀಂಕೋರ್ಟ್ ನಿರ್ದೇಶನದಂತೆ ಅತೃಪ್ತ ಶಾಸಕರ ರಾಜೀನಾಮೆ ಪತ್ರ ಸ್ವೀಕರಿಸಿ ತದನಂತರ ಸುದ್ದಿಗಾರರಿಗೆ ತಮ್ಮ ನಿಲುವು ಸ್ಪಷ್ಟಪಡಿಸಿದ ಅವರು, ಸಾರ್ವಜನಿಕ ಜೀವನದಲ್ಲಿ ಸತ್ಯಕ್ಕೆ ಹತ್ತಿರವಾಗಿ ಕಾರ್ಯನಿರ್ವಹಿಸಿದ್ದೇನೆ. ಈಗಲೂ ಅದೇ ಹಾದಿಯಲ್ಲಿ ಮುಂದುವರಿದಿದ್ದೇನೆ. ಶಾಸಕರ ರಾಜೀನಾಮೆ ಅಂಗೀಕರಿಸಲು ಯಾವುದೇ ವಿಳಂಬ ಮಾಡಿಲ್ಲ. ಸಂವಿಧಾನದ ನಿಯಮ 190ರ ಅನ್ವಯ ಶಾಸಕರ ರಾಜೀನಾಮೆ ಕುರಿತಂತೆ ನನಗೆ ಸ್ಪಷ್ಟ ಮನವರಿಕೆ ಮಾಡಿಕೊಳ್ಳಲು ಅವಕಾಶಗಳಿವೆ. ಅದರಂತೆಯೇ ನಾನು ಮುನ್ನಡೆಯಲಿದ್ದೇನೆ ಎಂದು ಸ್ಪಷ್ಟಪಡಿಸಿದರು.

ನಾನು ನಾಡಿನ ಜನರ ಹಂಗಿನಲ್ಲಿದ್ದೇನೆ. ಸಂವಿಧಾನದ ಹಂಗಿನಲ್ಲಿದ್ದೇನೆಯೇ ಹೊರತು ಬೇರಾವ ಮೂರನೇ ವ್ಯಕ್ತಿಯ ಹಂಗಿಗೆ ಒಳಗಾಗಲು ಸಾಧ್ಯವೇ ಇಲ್ಲ. ಸುಪ್ರೀಂಕೋರ್ಟ್ ಕೂಡ ಒಕ್ಕೂಟ ವ್ಯವಸ್ಥೆಯಲ್ಲಿನ ಸಂವಿಧಾನಬದ್ಧ ಅಂಗವಾಗಿರುವುದರಿಂದ ಆದೇಶಕ್ಕೆ ಗೌರವ ಕೊಟ್ಟಿದ್ದೇನೆ. ಸುಪ್ರೀಂಕೋರ್ಟ್ ರಾಜೀನಾಮೆ ಅಂಗೀಕರಿಸಿ ಎಂದು ಎಲ್ಲಿಯೂ ಹೇಳಿಲ್ಲ. ಹಾಗೆಯೇ ರಾಜೀನಾಮೆ ಅಂಗೀಕರಿಸಲು ನೀತಿ ನಿಯಮಗಳಿಗೆ ಅದರನುಸಾರವೇ ಮುಂದಿನ ಹೆಜ್ಜೆ ಇಡಲಿದ್ದೇನೆ. ಪಕ್ಷಾಂತರ ನಿಷೇಧ ಕಾಯ್ದೆ ಜಾರಿ ಮಾಡಿರುವ ಉದ್ದೇಶ ಪರಿಪಾಲನೆ ಆಗಬೇಕಿದೆ ಎಂದರು.

## ನಾನು ಯಾರ ಹಂಗಿನಲ್ಲೂ ಇಲ್ಲ

ಬೇರೆಬೇರೆ ರಾಜ್ಯಗಳಲ್ಲಿ ಶಾಸಕರು ರಾಜೀನಾಮೆ ನೀಡಿದ್ದರೂ ವರ್ಷಾನುಗಟ್ಟಲೇ ತೀರ್ಮಾನ ಕೈಗೊಳ್ಳದ ಉದಾಹರಣೆಗಳಿವೆ. ಅದೇರೀತಿ ಶಾಸಕರನ್ನು ಅನರ್ಹಗೊಳಿಸುವ ವಿಷಯವೂ ಹಾಗೆಯೇ ವರ್ಷಗಟ್ಟಲೇ ನೆನಗುದಿಗೆ ಬಿದ್ದಿರುವ ಸಂಗತಿಗಳು ಸಾಕಷ್ಟಿವೆ ಎಂದು ತಮ್ಮ ಧೋರಣೆಯನ್ನು ಸಮರ್ಥಿಸಿಕೊಂಡ ಅವರು, ಇಡೀ ಪ್ರಕ್ರಿಯೆಯು ಯಾರನ್ನು ಉಳಿಸುತ್ತದೆ. ಯಾರನ್ನು ಉರುಳಿಸುತ್ತದೆ ಎಂಬುದು ನನಗೆ ಸಂಬಂಧಿಸಿದಲ್ಲ. ಸಭಾಧ್ಯಕ್ಷನಾಗಿ ನನ್ನ ಕರ್ತವ್ಯ ನಿಭಾಯಿಸಬೇಕಾಗಿದೆ ಎಂದರು.

ನನ್ನ ವಿರುದ್ಧ ಅನಗತ್ಯವಾದ ಆರೋಪಗಳು ಕೇಳಿ ಬಂದಿವೆ. ಸಭಾಧ್ಯಕ್ಷರು ಅನಗತ್ಯವಾಗಿ ವಿಳಂಬ ಮಾಡುತ್ತಿದ್ದಾರೆ. ರಾಜೀನಾಮೆ ಅಂಗೀಕರಿಸುತ್ತಿಲ್ಲ ಎಂಬುದು ಸರಿಯಲ್ಲ. ನನಗೂ ಗೌರವ. ಮರ್ಯಾದೆ ಇದೆ. ಎಪ್ಪತ್ತು ವರ್ಷದ ಜೀವನ ಹಾಗೆಯೇ ನಲವತ್ತು ವರ್ಷದ ರಾಜಕಾರಣದ ಜೀವನದಲ್ಲಿ ಎಲ್ಲಿಯೂ ಬೆರಳು ತೋರಿಸುವಂತೆ ಮಾಡಿಕೊಂಡಿಲ್ಲ. ಆದರೆ, ಈಗ ನಡೆಯುತ್ತಿರುವ ಸಂಗತಿಗಳು ಬೇಸರ ತಂದಿವೆ ಎಂದು ಹೇಳಿಕೊಂಡರು.

ಶಾಸಕರು ದಿ.6 ರಂದು ರಾಜೀನಾಮೆ ನೀಡಿದ್ದಾರೆ. ಅಂದು 12.45ರವರೆಗೂ ಕಚೇರಿಯಲ್ಲಿದ್ದೇ ಯಾರೂ ಬಂದಿರಲಿಲ್ಲ. ನಾನು ಹೊರಹೋದ ನಂತರ 2.30ರ ಸುಮಾರಿಗೆ ಆಗಮಿಸಿ ರಾಜೀನಾಮೆ ನೀಡಿದ್ದಾರೆ. ಶಾಸಕರು ತಾವು ಬರುವ ಪೂರ್ವದಲ್ಲಿ ನನಗೆ ಮಾಹಿತಿಯನ್ನಾದರೂ ನೀಡಬೇಕಿತ್ತು. ಅದನ್ಯಾವುದನ್ನೂ ಮಾಡಿಲ್ಲ. ನನ್ನ ವೈಯಕ್ತಿಕ ಕಾರಣಗಳಿಗಾಗಿ ನಾನು ಮಂಗಳವಾರ ಕಚೇರಿಗೆ ಬಂದಿದ್ದೇನೆ. ಕೇವಲ ಮೂರು ದಿನಗಳ ಅಂತರದಲ್ಲಿ ಇಡೀ ಪ್ರಕ್ರಿಯೆ ನಡೆದಿದೆ. ಶಾಸಕರು ಮುಂಬಯಿಲ್ಲಿ ಮಾಧ್ಯಮಗೋಷ್ಠಿ ಮಾಡಿದ್ದಾರೆ. ಜೀವಭಯ ಎಂದು ಹೇಳಿಕೊಂಡಿದ್ದಾರೆ. ನನ್ನೆದುರಿಗೆ ಹೇಳಿದ್ದರೆ ರಕ್ಷಣೆ ಕೊಡುತ್ತಿದ್ದೆ.

ಮುಂಬಯಿಂದ ದೆಹಲಿಗೆ ತೆರಳಿ ಸುಪ್ರೀಂಕೋರ್ಟ್ ಆದೇಶ ಮೂಲಕ ಬೆಂಗಳೂರಿನಲ್ಲಿ ಬಿಗಿ ಭದ್ರತೆಯಲ್ಲಿ ಆಗಮಿಸಿ ಪುನ ರಾಜೀನಾಮೆ ಪತ್ರ ನೀಡಿದ್ದಾರೆ. ಹೀಗಿರುವಾಗ ನಾನು ರಾಜ್ಯದ ಜನತೆಗೆ ವಾಸ್ತವಂಶ ಮನವರಿಕೆ ಮಾಡಿಕೊಡುವುದು ಮತ್ತು ಸಂವಿಧಾನದ ಆಶಯಗಳನ್ನು ಪರಿಪಾಲಿಸುವ ಹೊಣೆ ನನ್ನ ಮೇಲಿದೆ. ಅದಕ್ಕೆ ಬದ್ಧ ಎಂದು ಹೇಳಿದರು.